# ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ

**ಸಿಸಿ ಸಂಖ್ಯೆ: 348/2023**

ಚಾ.ಸಾ–01, ಪ್ರಾ.ಸಾ–01

| | | |
|---|---|---|
| ಹೆಸರು | : | ವೀರೇಶ್ |
| ತಂದೆಯ ಹೆಸರು | : | ಲೇಟ್ ಕೆ.ಬಿ. ಚಿನ್ನಸ್ವಾಮಿ |
| ವಯಸ್ಸು | : | 56 |
| ವೃತ್ತಿ | : | ವ್ಯವಸಾಯ |
| ವಾಸ | : | ಕುರುಬೂರು ಗ್ರಾಮ, ತಿ. ನರಸೀಪುರ ತಾಲ್ಲೂಕು |

**ದಿನಾಂಕಃ 06.12.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಚಾಸಾ–2 ಮತ್ತು 23 ರವರ ಪರಿಚಯವಿದೆ. ಚಾಸಾ–3 ರಿಂದ 9 ಮತ್ತು 24 ರವರ ಪರಿಚಯವಿಲ್ಲ. ಆರೋಪಿತನನ್ನು ನಾನು ನೋಡಿಲ್ಲ.

2023 ರಲ್ಲಿ ಒಂದು ದಿನ ನಾನು ಮತ್ತು ಚಾಸಾ–2 ರವರು ಸೇರಿ ಮೋಟಾರ್ ಸೈಕಲ್‌ನಲ್ಲಿ ತಿ. ನರಸೀಪುರ ಕಡೆಗೆ ಹೋಗುತ್ತಿದ್ದಾಗ, ತಿ. ನರಸೀಪುರ ತಾಲ್ಲೂಕಿನ ಕುರುಬೂರು ಗ್ರಾಮದ ವ್ಯಾಪ್ತಿಯಲ್ಲಿ ಬರುವ ಪಿಂಜರ್ ಪೋಲ್ ಬಳಿ ತಿ.ನರಸೀಪುರ–ಚಾಮರಾಜನಗರ ಮುಖ್ಯ ರಸ್ತೆಯಲ್ಲಿ ಮಧ್ಯಾಹ್ನ 12.30 ಗಂಟೆಗೆ ತಿ. ನರಸೀಪುರ ಕಡೆಯಿಂದ ಬಂದ ಒಂದು ಎಸ್.ಎಂ.ಆರ್. ಖಾಸಗಿ ಬಸ್ ಮತ್ತು ಚಾಮರಾಜನಗರ ಕಡೆಯಿಂದ ಬಂದ ಇನೋವಾ ಕಾರ್ ನಡುವೆ ಅಪಘಾತವಾಗಿರುತ್ತದೆ. ಆ ಎರಡೂ ವಾಹನಗಳ ಚಾಲಕರು ಆ ಎರಡೂ ವಾಹನಗಳನ್ನು ಅತಿವೇಗವಾಗಿ ಚಾಲನೆ ಮಾಡಿದ್ದರು.

ಆ ಕಾರಿನಲ್ಲಿ 13 ಜನರು ಪ್ರಯಾಣ ಮಾಡಿದ್ದು, ಅದರಲ್ಲಿ 10 ಜನರು ಮರಣ ಹೊಂದಿದ್ದರು. ಇಬ್ಬರು ಗಾಯಾಳುಗಳನ್ನು ತಿ. ನರಸೀಪುರದ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿದೆವು. ಮತ್ತೊಬ್ಬ ಗಾಯಾಳುವನ್ನು ಆಸ್ಪತ್ರೆಗೆ ಕಳುಹಿಸುವಾಗ ಮರಣ ಹೊಂದಿರುತ್ತಾರೆ.

ಆ ಬಸ್‌ನಲ್ಲಿ ಪ್ರಯಾಣ ಮಾಡುತ್ತಿದ್ದ 15-20 ಜನರಿಗೆ ಸಣ್ಣಪುಟ್ಟ ಗಾಯಗಳಾಗಿದ್ದವು. ಅವರನ್ನು ತಿ. ನರಸೀಪುರ ಸರ್ಕಾರಿ ಆಸ್ಪತ್ರೆಗೆ ಕಳುಹಿಸಲಾಯಿತು.

ಆ ಕಾರಿನ ಚಾಲಕನಿಗೆ ಏನಾಗಿತ್ತು ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ಆ ಬಸ್‌ನ ಚಾಲಕನಿಗೆ ಏನಾಗಿತ್ತು ಎಂದು ನನಗೆ ಗೊತ್ತಿಲ್ಲ. ಆತ ಸ್ಥಳದಲ್ಲಿ ಇರಲಿಲ್ಲ. ನಾನು ಆತನನ್ನು ನೋಡಿಲ್ಲ. ಆ ಕಾರಿನಲ್ಲಿದ್ದವರು ಬಳ್ಳಾರಿ ಜಿಲ್ಲೆಯವರಾಗಿದ್ದರು.

ಆನಂತರ ತಿ. ನರಸೀಪುರ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ಅದನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ.1 ಮತ್ತು 1(ಎ) ಎಂದು ಗುರುತಿಸಲಾಯಿತು.

ಅದೇ ದಿನ ಪೊಲೀಸರು ಅಪಘಾತ ಸ್ಥಳಕ್ಕೆ ಸಂಜೆ 5.30 ಗಂಟೆಗೆ ಬಂದು ಪಂಚನಾಮವನ್ನು ಜರುಗಿಸಿದ್ದರು. ಆ ಸಮಯದಲ್ಲಿ ನಾನು ಮತ್ತು ಚಾಸಾ-23 ರವರು ಇದ್ದೆವು. ಆ ವೇಳೆಗೆ ಪೊಲೀಸರು ಆ ಎರಡೂ ವಾಹನಗಳನ್ನು

ಜಪ್ತಿಪಡಿಸಿದರು. ಆ ಕಾರು ಸಂಪೂರ್ಣವಾಗಿ ಜಖ: ಆಗಿತ್ತು. ಆ ಎರಡೂ ವಾಹನಗಳ ಸಂಖ್ಯೆಗಳು ನನಗೆ ಗೊತ್ತಿಲ್ಲ.

ಸದರಿ ಪಂಚನಾಮವನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ.2 ಮತ್ತು 2(ಎ) ಎಂದು ಗುರುತಿಸಲಾಯಿತು.

ಅಪಘಾತ ಸ್ಥಳದ ಭಾವಚಿತ್ರಗಳನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಮತ್ತು ಅವುಗಳ ಸಿ.ಡಿ.ಯನ್ನು ನಿಪಿ.3 ರಿಂದ 11 ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಭಾಗಶ: ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಭಾಗಶ: ಪಾಟೀ ಸವಾಲು ಮಾಡಲು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಭಾಗಶ: ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರ ಕೋರಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಭಾಗಶ: ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

ದಿನಾಂಕ 29.058.2023 ರಂದು ಮಧ್ಯಾಹ್ನ 2.15 ಗಂಟೆ ಸಮಯದಲ್ಲಿ ಅಪಘಾತವಾಗಿದೆ ಎಂದರೆ ಸರಿ. ಆ ಕಾರಿನಲ್ಲಿದ್ದ ಗಾಯಾಳುಗಳನ್ನು ಚಾಮರಾಜನಗರ ಆಸ್ಪತ್ರೆಗೆ ಕಳುಹಿಸಲಾಯಿತು ಎಂದರೆ ನೆನಪಿಲ್ಲ. ಸದರಿ ಖಾಸಗಿ ಬಸ್ ಸಂಖ್ಯೆ ಕೆಎ-55/2061 ಮತ್ತು ಕಾರಿನ ಸಂಖ್ಯೆ ಕೆಎ-02/ಎಡಿ-5184

ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ಎರಡೂ ವಾಹನಗಳ ಚಾಲಕರು ಯಾರು ಎಂದು ನನಗೆ ತಿಳಿಯಿತು ಎಂದರೆ, ಕಾರಿನ ಚಾಲಕ ಯಾರು ಎಂದು ತಿಳಿಯಿತು.

ಪಂಚನಾಮದ ವೇಳೆಗೆ ಚಾಸಾ-24 ರವರು ಇದ್ದರು ಎಂದರೆ ಸರಿ. ನಾನು ಪೊಲೀಸ್ ಠಾಣೆಗೆ ಹೋದಾಗ ಬಸ್‌ನ ಚಾಲಕನ ಹೆಸರು ದೀಪಕ್ ಎಂದು ನನಗೆ ತಿಳಿದು ಬಂತು ಎಂದರೆ ಸರಿಯಲ್ಲ. ಆ ಕುರಿತು ದಿನಾಂಕ 10.06.2023 ರಂದು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅದನ್ನು ತಿರಸ್ಕರಿಸಿದ್ದರಿಂದ, ಅದನ್ನು ನಿಪಿ.12 ಎಂದು ಗುರುತಿಸಲಾಯಿತು.

ನಾನು ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಕೆ.ಕೆ.ಎನ್. ವಕೀಲರಿಂದ**

ನಾನು ಮತ್ತು ಚಾಸಾ-2 ರವರು ಅಪಘಾತದ ದಿನದಂದು ಹೋಗುತ್ತಿದ್ದ ಮೋಟಾರ್ ಸೈಕಲ್ ಸಂಖ್ಯೆ ನನಗೆ ಗೊತ್ತಿಲ್ಲ. ನಮ್ಮಿಂದ ನಮ್ಮ ಮುಂದೆ ಹೋಗುತ್ತಿದ್ದ ಇನೋವಾ ಕಾರಿನ ನಡುವೆ ಸುಮಾರು 20-30 ಮೀಟರ್ ಅಂತರವಿತ್ತು. ಎದುರಿಗೆ ಬರುತ್ತಿದ್ದ ಸದರಿ ಖಾಸಗಿ ಬಸ್‌ನ್ನು ನಾವು ಅಷ್ಟೇ ಅಂತರದಲ್ಲಿ ನೋಡಿದ್ದೆವು. ಸದರಿ ಇನೋವಾ ಕಾರು ವೇಗವಾಗಿ ಚಲಿಸುತ್ತಿತ್ತು ಎಂದರೆ ಸರಿ. ಆ ರೀತಿ ಚಲಿಸಿ ಅದು ರಸ್ತೆಯ ಬಲಕ್ಕೆ ಬಂದಿತ್ತು ಎಂದರೆ ಸರಿಯಲ್ಲ. ಆ ಕಾರು ಆ ಬಸ್ಸಿಗೆ ಡಿಕ್ಕಿ ಪಡಿಸಿರುತ್ತದೆ ಎಂದರೆ, ಎರಡೂ ವಾಹನಗಳು ಮುಖಾಮುಖಿ ಡಿಕ್ಕಿಯಾಗಿರುತ್ತವೆ.

ನಾನು ಅಪಘಾತವನ್ನು ನೋಡಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಮುಂದೆ ಸುಳ್ಳು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

ದೂರನ್ನು ಪೊಲೀಸರು ಬೆರಳಚ್ಚು ಮಾಡಿಸಿದ್ದಾರೆ ಎಂದರೆ ಸರಿಯಲ್ಲ. ಅದರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಅಪಘಾತದಲ್ಲಿ ಮೃತಪಟ್ಟವರಿಗೆ ಅನುಕೂಲವಾಗಲೀ ಎಂದು ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

ನಾನು ಮತ್ತು ಚಾಸಾ-2 ರವರು ಅಪಘಾತ ಸ್ಥಳಕ್ಕೆ ಹೊಗಿಲ್ಲ ಮತ್ತು ಅಪಘಾತವನ್ನು ನೋಡಿಲ್ಲ ಎಂದರೆ ಸರಿಯಲ್ಲ.

ಪಂಚನಾಮದಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಅದರ ವಿಷಯಗಳನ್ನು ಪೊಲೀಸ್ ಠಾಣೆಯಲ್ಲಿ ಬರೆದಿದ್ದು, ಅಲ್ಲಿ ನನ್ನ ಸಹಿ ಪಡೆಯಲಾಗಿದೆ ಎಂದರೆ ಸರಿಯಲ್ಲ. ಅಪಘಾತದ ಸ್ಥಳದ ರಸ್ತೆಯ ನಡುವೆ ಇರುವ ಬಿಳಿ ಪಟ್ಟೆಯ ಮೇಲೆ ಸುಮಾರು 50 ಅಡಿವರೆಗೆ ಟೈರ್ ಉಜ್ಜಿರುವ ಗುರುತು ಇದೆ ಎಂದು ಪಂಚನಾಮದಲ್ಲಿ ನಮೂದಿಸಲಾಗಿದೆ ಎಂದರೆ ಸರಿ. ಆ ಕುರಿತು ಬಸ್‌ನ ಬ್ರೇಕ್‌ನ್ನು ಹಾಕಿದಾಗ ಕಂಡು ಬಂದಿರುವ ಗುರುತು ಎಂದರೆ ಸರಿಯುಲ್ಲ. ಆ ಗುರುತು ಚಾಮರಾಜನಗರ-ತಿ. ನರಸೀಪುರ ರಸ್ತೆಯ ಬಲಭಾಗದಲ್ಲಿತ್ತು.

ಸದರಿ ಕಾರಿನ ಚಾಲಕ ಆ ಕಾರನ್ನು ರಸ್ತೆಯ ಬಲಭಾಗಕ್ಕೆ ಚಲಿಸಿದ್ದರಿಂದ ಆ ಬಸ್‌ನ ಚಾಲಕ ಆ ಬಸ್ಸಿನ ಬ್ರೇಕ್‌ನ್ನು ಹಾಕಿದಾಗ ಸದರಿ ಟೈರಿನ ಗುರುತು ರಸ್ತೆಯಲ್ಲಿ ಕಂಡು ಬಂದಿದೆ ಎಂದರೆ ಸರಿಯಲ್ಲ.

ಪಂಚನಾಮವನ್ನು ಪೊಲೀಸ್ ಠಾಣೆಯಲ್ಲಿ ಬರೆದಿರುವುದರಿಂದ ಅದರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಅಪಘಾತವು ಕೇವಲ ಕಾರಿನ ಚಾಲಕನ ಅತಿವೇಗ ಚಾಲನೆಯಿಂದ ಆಗಿದೆ ಹೊರತು ಬಸ್‌ನ ಚಾಲಕನ ಅತಿವೇಗ ಚಾಲನೆಯಿಂದ ಆಗಿಲ್ಲ ಎಂದರೆ, ಇಬ್ಬರೂ ಚಾಲಕರ ಅತಿವೇಗ ಚಾಲನೆಯಿಂದ ಆಗಿದೆ. ಅಪಘಾತಕ್ಕೆ ಬಸ್ಸಿನ ಚಾಲಕ ಕಾರಣ ಅಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಅದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದ. ತಿ.ನರಸೀಪುರ**

**<u>ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ</u>**

**<u>ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ</u>**

**ಸಿಸಿ ಸಂಖ್ಯೆ: 348/2023**

ಚಾ.ಸಾ–02, ಪ್ರಾ.ಸಾ–02

| | | |
|---|---|---|
| ಹೆಸರು | : | ಶಿವಕುಮಾರ್ |
| ತಂದೆಯ ಹೆಸರು | : | ಮಹದೇವಯ್ಯ |
| ವಯಸ್ಸು | : | 44 |
| ವೃತ್ತಿ | : | ವ್ಯವಸಾಯ |
| ವಾಸ | : | ಕನ್ನಳ್ಳಿ ಗ್ರಾಮ, ತಿ. ನರಸೀಪುರ ತಾಲ್ಲೂಕು |

**<u>ದಿನಾಂಕಃ 06.12.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ</u>**

ಪ್ರಾಸಾ–1 ರವರ ಪರಿಚಯವಿದೆ. ಆರೋಪಿತನನ್ನು ನಾನು ನೋಡಿಲ್ಲ.

ದಿನಾಂಕ 25.05.2023 ರಲ್ಲಿ ನಾನು ಮತ್ತು ಪ್ರಾಸಾ–1 ರವರು ಸೇರಿ ಮೋಟಾರ್ ಸೈಕಲ್‌ನಲ್ಲಿ ತಿ. ನರಸೀಪುರ ಕಡೆಗೆ ಹೋಗುತ್ತಿದ್ದಾಗ, ತಿ. ನರಸೀಪುರ ತಾಲ್ಲೂಕಿನ ಕುರುಬೂರು ಗ್ರಾಮದ ವ್ಯಾಪ್ತಿಯಲ್ಲಿ ಬರುವ ಪಿಂಜರ್ ಪೋಲ್ ಬಳಿ ತಿ.ನರಸೀಪುರ–ಕೊಳ್ಳೇಗಾಲ ಮುಖ್ಯ ರಸ್ತೆಯಲ್ಲಿ ಮಧ್ಯಾಹ್ನ 2.15 ಗಂಟೆಗೆ ತಿ. ನರಸೀಪುರ ಕಡೆಯಿಂದ ಬಂದ ಒಂದು ಎಸ್.ಎಂ.ಆರ್. ಖಾಸಗಿ ಬಸ್ ಸಂಖ್ಯೆ ಕೆಎ–55/2061 ಮತ್ತು ಕೊಳ್ಳೇಗಾಲ ಕಡೆಯಿಂದ ಬಂದ ಇನೋವಾ ಕಾರ್ ನಡುವೆ ಅಪಘಾತವಾಗಿರುತ್ತದೆ. ಆ ಎರಡೂ ವಾಹನಗಳ ಚಾಲಕರು ಆ ಎರಡೂ ವಾಹನಗಳನ್ನು ಅತಿವೇಗವಾಗಿ ಚಾಲನೆ ಮಾಡಿದ್ದರು.

ಅಪಘಾತದ ಪರಿಣಾಮ ಆ ಕಾರು ಜಖ: ಆಗಿತ್ತು. ಆ ಕಾರಿನಲ್ಲಿ 13 ಜನರು ಪ್ರಯಾಣ ಮಾಡಿದ್ದು, ಅದರಲ್ಲಿ 10 ಜನರು ಸ್ಥಳದಲ್ಲಿ ಮರಣ ಹೊಂದಿದ್ದರು.

ಮೂರು ಜನ ಗಾಯಾಳುಗಳನ್ನು ಚಾಮರಾಜನಗರ ಜಿಲ್ಲಾ ಆಸ್ಪತ್ರೆಗೆ ಕಳುಹಿಸಿದೆವು. ಆ ಮೂವರಲ್ಲಿ ಒಬ್ಬರು ಮೈಸೂರಿನ ಕೆ ಅರ್ ಆಸ್ಪತ್ರೆಯಲ್ಲಿ ಮರಣ ಹೊಂದಿರುತ್ತಾರೆ.

ಆ ಬಸ್‌ನಲ್ಲಿ ಪ್ರಯಾಣ ಮಾಡುತ್ತಿದ್ದ 20 ಜನರಿಗೆ ಸಣ್ಣಪುಟ್ಟ ಗಾಯಗಳಾಗಿದ್ದವು. ಅವರನ್ನು ತಿ. ನರಸೀಪುರ ಸರ್ಕಾರಿ ಆಸ್ಪತ್ರೆಗೆ ಕಳುಹಿಸಲಾಯಿತು.

ಆ ಬಸ್‌ನ್ನು ಚಾಮರಾಜನಗರ ತಾಲ್ಲೂಕಿನ ಬಾಗಲಿ ಗ್ರಾಮದ ದೀಪಕ್ ಎನ್ನುವ ವ್ಯಕ್ತಿ ಚಾಲನೆ ಮಾಡಿದ್ದ ಎಂದು ಮತ್ತು ಆ ಕಾರನ್ನು ಶ್ರೀರಂಗಪಟ್ಟಣದ ಆದಿತ್ಯ ಎನ್ನುವ ವ್ಯಕ್ತಿ ಚಾಲನೆ ಮಾಡಿದ್ದ. ಸದರಿ ಆದಿತ್ಯ ಸ್ಥಳದಲ್ಲಿ ಮರಣ ಹೊಂದಿರುತ್ತಾರೆ. ಆ ಕಾರಿನಲ್ಲಿದ್ದವರು ಬಳ್ಳಾರಿ ಜಿಲ್ಲೆಯ ಸಂಗನಕಲ್ಲು ಗ್ರಾಮದವರಾಗಿದ್ದರು.

ಸದರಿ ವಾಹನಗಳ ಭಾವಚಿತ್ರಗಳನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳು ಈಗಾಗಲೇ ನಿಪಿ.7 ರಿಂದ 10 ಎಂದು ಗುರುತಿಸಲ್ಪಟ್ಟಿವೆ.

ಘಟನೆಯ ಕುರಿತು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಕೆ.ಕೆ.ಎನ್. ವಕೀಲರಿಂದ**

ನಾನು ಮತ್ತು ಪ್ರಾಸಾ-1ರವರು ಅಪಘಾತದ ದಿನದಂದು ಮೋಟಾರ್ ಸೈಕಲ್‌ನಲ್ಲಿ ಹೋಗುತ್ತಿದ್ದಾಗ ಸದರಿ ಇನೋವಾ ಕಾರು ನಮ್ಮನ್ನು ಹಿಂದಿಕ್ಕಿ ವೇಗವಾಗಿ

ಹೋಗಿರುತ್ತದೆ. ನಾನು ಮತ್ತು ಪ್ರಾಸಾ-1 ರವರು ಹೋಗುತ್ತಿದ್ದ ಮೋಟಾರ್ ಸೈಕಲ್ ಸಂಖ್ಯೆ ನನಗೆ ಗೊತ್ತಿಲ್ಲ. ಅದು ಪ್ರಾಸಾ-1 ರವರದಾಗಿತ್ತು.

ಸದರಿ ಖಾಸಗಿ ಬಸ್ ಗಂಟೆಗೆ ಎಷ್ಟು ಕಿ.ಮೀ. ವೇಗದಲ್ಲಿತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಅಪಘಾತದ ದಿನ ನಾನು ಮತ್ತು ಪ್ರಾಸಾ-1 ರವರು ಅಪಘಾತ ಸ್ಥಳದಲ್ಲಿ ಹೋಗಿರದೆ ಇದ್ದರೂ ಕೂಡ, ಮೃತ ಪಟ್ಟ ವ್ಯಕ್ತಿಗಳ ಕುಟುಂಬಗಳಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತವಾದ 3-4 ದಿನಗಳ ನಂತರ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಹೇಳಿಕೆಯ ವಿಷಯವನ್ನು ಓದಿ ತಿಳಿದುಕೊಂಡಿದ್ದೇನೆ. ನಾನು ಯಾವುದೇ ಹೇಳಿಕೆ ನೀಡಿಲ್ಲದೆ ಇದ್ದರೂ ಕೂಡ ನೀಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಅದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದ. ತಿ.ನರಸೀಪುರ**